ಸರ್ಕಾರಿ ಸೌಲಭ್ಯ ಪಡೆಯುವವರಿಗೆ ವಿವಿಧ ಯೋಜನೆಗಳಿಗೆ ಆದಾಯ ಮಿತಿ ನಿಗದಿಪಡಿಸುವುದು :

777 **ಶ್ರೀ ರಘುಪತಿ ಭಟ್ ಕೆ. (ಉಡುಪಿ)** : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಯೋಜನೆಗಳಾದ ಸಚಿಧ್ಯಾ ಸುರಕ್ಷಾ, ಭಾಗ್ಯಲಕ್ಷ್ಮಿ, ಶಾಲಾ ಫೀಸ್ ಮಾಫಿ, ವಿವಿಧ ಮಾಶಾಸನ, ಅಂಗವಿಕಲ ವೇತನ, ಬಿಪಿಎಲ್ ಸೌಲಭ್ಯ ಪಡೆಯಲು ಆದಾಯ ಮಿತಿ ಎಷ್ಟು; ಇದನ್ನು ನಿಗದಿಪಡಿಸಿ ಎಷ್ಟು ವರ್ಷಗಳಾಗಿವೆ;

ಆ) ಪ್ರತಿಯೊಂದು ಯೋಜನೆಗೆ ಒಂದೊಂದು ಮಿತಿ ನಿಗದಿಪಡಿಸಿರುವುದು ಸಮಂಜಸವೇ; ಆದರೆ ತಿಂಗಳಿಗೆ ರೂ.500/–ರಂತೆ ವರ್ಷಕ್ಕೆ ರೂ.6000/ ಆದಾಯದ ಮಿತಿಯಲ್ಲಿ ಬಡ ಕಾರ್ಮಿಕ ಜೀವಿಸಲು ಸಾಧ್ಯವೇ;

ಇ) ಪ್ರಸ್ತುತ ಈಗಿರುವ ಆದಾಯ ಮಿತಿಯನ್ನು ವಾರ್ಷಿಕ ರೂ.24,000/ ಏರಿಸುವಲ್ಲಿ ಸರ್ಕಾರದ ನಿಲುವೇನು;

ಈ) ಈ ದಿಸೆಯಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ ಆದಾಯ ಮಿತಿ ಈ ಕೆಳಗಿನಂತಿದೆ.

ಕ್ರ. ಸಂ.	ಯೋಜನೆ	ನಿಗದಿಪಡಿಸಿರುವ ಆದಾಯ ಮಿತಿ	ನಿಗದಿ ಪಡಿಸಿರುವ ವರ್ಷ
1	ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ	ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಾಲಯವು, ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸಲು ಕುಟುಂಬದ ಶೈಕ್ಷಣಿಕ, ಸಾಮಾಜಿಕ ಹಾಗೂ	2007

		ಆರ್ಥಿಕ ಸ್ಥಿತಿಗತಿಗಳ ಬಗ್ಗೆ 13 ಅಂಶಗಳನ್ನು ನಿಗದಿಪಡಿಸಿದೆ. ಪ್ರತಿಯೊಂದು ಅಂಶಕ್ಕೆ 0–4 ಅಂಕಗಳನ್ನು ನಿಗದಿಪಡಿಸಲಾಗಿದೆ. ಅದರಂತೆ 26 ಅಂಕಗಳು ಅಥವಾ ಅದಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ಕುಟುಂಬ ಗಳನ್ನು ಬಡತನದ ರೇಖೆಗಿಂತ ಕೆಳಗಿದೆ ಎಂದು ಪರಿಗಣಿಸುವುದು	
2	ಸಂಧ್ಯಾ ಸುರಕ್ಷಾ	ರೂ. 20,000/–	2007
3	ಅಂಗವಿಕಲ ವೇತನ	ರೂ.6000/–	1988
4	ವಿಧವಾ ವೇತನ	ರೂ.6000/–	1995
5	ಭಾಗ್ಯ ಲಕ್ಷ್ಮಿ	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ, ಕಡ್ಡಾಯ ಗುರುತಿನ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬ.	2006
1	**2**	**3**	**4**
6	ಶಾಲಾ ಫೀಸ್ ಮಾಫಿ	ಎಲ್ಲಾ ಸಾಮಾನ್ಯ ಹೆಣ್ಣು ಮಕ್ಕಳಿಗೆ (6 ರಿಂದ 10 ನೇ ತರಗತಿ) ಸರ್ಕಾರೇತರ ಶುಲ್ಕ ಮರುಪಾವತಿ.	2009
7	ಬಿಪಿಎಲ್ ಸೌಲಭ್ಯ ಪಡೆಯಲು	ಗ್ರಾಮಾಂತರ ಪ್ರದೇಶಗಳಿಗೆ ರೂ.12,000/– ಹಾಗೂ ಪಟ್ಟಣ ಪ್ರದೇಶಗಳಿಗೆ ರೂ.17,000/–	2006

ಆ) ಪ್ರತಿಯೊಂದು ಯೋಜನೆಯಡಿ ಪ್ರಯೋಜನ ಪಡೆಯುತ್ತಿರುವ ಫಲಾನುಭವಿಗಳು ಭಿನ್ನವಾಗಿರುವುದರಿಂದ ಬಡತನ ರೇಖೆಯನ್ನು ಗುರುತಿಸಲು ವಿವಿಧ ಮಾನದಂಡವನ್ನು ನಿಗದಿಪಡಿಸಲಾಗಿದೆ.

ತಿಂಗಳಿಗೆ ರೂ.500/ರಂತೆ ವರ್ಷಕ್ಕೆ ರೂ.6000 ಆದಾಯದ ಮಿತಿಯಲ್ಲಿ ಬಡಕಾರ್ಮಿಕ ಜೀವಿಸಲು ಸಾಧ್ಯವಿರುವುದಿಲ್ಲಾ.

ಇ) ಪ್ರಸ್ತುತ ಈಗಿರುವ ಆದಾಯ ಮಿತಿಯನ್ನು ವಾರ್ಷಿಕ ರೂ.24,000/– ಕ್ಕೆ ಏರಿಸುವ ಬಗ್ಗೆ ಸೂಕ್ತ ಅಧ್ಯಯನ ನಡೆಸಿ ತೀರ್ಮಾನಿಸಲಾಗುವುದು.

ಈ) ಈ ದಿಸೆಯಲ್ಲಿ ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು.

ಆರ್.ಟಿ.ಸಿ. ತಿದ್ದುಪಡಿ ಅಧಿಕಾರವನ್ನು ತಹಶೀಲ್ದಾರರಿಗೆ ನೀಡುವುದು :

454 ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಜಮೀನಿನ ಆರ್.ಟಿ.ಸಿ.ಯಲ್ಲಿನ ತಿದ್ದುಪಡಿ ಮಾಡುವ ಅಧಿಕಾರವನ್ನು ಉಪ ವಿಭಾಗಾಧಿಕಾರಿಗಳಿಗೆ ನೀಡಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರೈತರ ಜಮೀನಿನ ಆರ್.ಟಿ.ಸಿ.ಯಲ್ಲಿನ ತಿದ್ದುಪಡಿ ಮಾಡುವ ಅಧಿಕಾರವನ್ನು ಉಪವಿಭಾಗಾಧಿಕಾರಿಗಳಿಂದ ಆಯಾ ತಾಲ್ಲೂಕಿನ ತಹಶೀಲ್ದಾರ್‌ರವರಿಗೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ತಿದ್ದುಪಡಿ ಮಾಡುವ ಅಧಿಕಾರವನ್ನು ಯಾವಾಗ ತಹಶೀಲ್ದಾರ್‌ರವರಿಗೆ ನೀಡಲಾಗುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.